ಪ್ರಾಕ್ಟಿಸ್‌ನಲ್ಲಿ ಇದು ಒಳ್ಳೆಯ ವಿಧಾನವೆಂದು ಒಪ್ಪಿಕೊಂಡರು. ಆದು ಹೊರಗಡೆ ಬರುವುದಕ್ಕೆ ಬದಲಾಗಿ ಅಲ್ಲಿ ಇನ್ನೊಬ್ಬ ಪ್ರೊಫೆಸರ್ ನೇರವಾಗಿ ಇದನ್ನು ನಾನು ಟೆಕ್ನಾಲಜಿ ಮಾಡಿರುವಂಥಾದ್ದು ಎಂದು ಹೇಳುತ್ತಾರೆ. ಆದು ಹೊರಗಡೆ ಬಂದ ತಕ್ಷಣ ಏನು ಹೇಳುತ್ತಾರೆ. ಪತ್ರಿಕೆಗಳಿಗೆ ನಂತರ ಅವರೇ

4.30 ಪಿ.ಎಂ.

ಹೋಗುತ್ತಾರೆ. ಇದು ದಿನಾಂಕ: 13.3.1999ರ ಹಿಂದೂ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ "Research findings plagiarised" ಅಂದರೆ, ವಿಮಾನವನ್ನು ಯಾರೋ ಅಪಹರಿಸಿಕೊಂಡು ಹೋದರೆ ಅದನ್ನು ಹೈಜಾಕಿಂಗ್ ಎನ್ನುತ್ತಾರೆ. ಒಬ್ಬರು ಬರೆದಂಥ ಪುಸ್ತಕವನ್ನು ಇನ್ನೊಬ್ಬರು ಕಾಪಿ ಮಾಡಿ ಬರೆದರೆ ಅದನ್ನು ಕಾಪಿರೈಟ್ ವೈರೇಟ್ ಎನ್ನುತ್ತಾರೆ. ಒಬ್ಬರು ಸಂಶೋಧನೆ ಮಾಡಿ ಕಂಡುಹಿಡಿದಿರತಕ್ಕದ್ದನ್ನು ಇನ್ನೊಬ್ಬರು ನಾನು ಅದನ್ನು ಸಂಶೋಧನೆ ಮಾಡಿದ್ದೇನೆ ಎನ್ನುವುದಕ್ಕೆ Plagiarizing ಎನ್ನುತ್ತಾರೆ. ಇದನ್ನು ನಾನು ಕಂಡು ಹಿಡಿದಿದ್ದೇನೆಂದು ಹೇಳಿದ ತಕ್ಷಣ, ಸಿವಿಲ್ ಟೆಕ್ನಾಲಜಿ ಬಗ್ಗೆ ಯಾವ ಜನರು ಇದರ ಅನುಕೂಲವನ್ನು ಪಡೆದಿದ್ದರೋ ಅವರಿಗೆ ನೋಮಾಗಿ ಅವರು ಒಂದು ಪತ್ರಿ[illegible] ಹೇಳಿಕೆ ಕೊಡುತ್ತಾರೆ. ಆದು ಇವರಲ್ಲ ಮಾಡಿದ್ದು ಅದನ್ನು ಡಾ: ಶಿವಶಂಕರ್ ಎನ್ನುವವರು ಮಾಡಿದ್ದು ಎಂದು ಹೇಳಿದಾಗ, ಈ ವಿಷಯ ಬಯಲಿಗೆ ಬಂತಲ್ಲ ಎಂದು ಆಗ ವಿಶ್ವವಿದ್ಯಾನಿಲಯದವರು ಆಸಿಸ್ಟೆಂಟ್ ಪ್ರೊಫೆಸರ್‌ಗೆ ಇದರ ಬಗ್ಗೆ ವಿವರಣೆ ಕೊಡಿ ಎಂದು ನೋಟೀಸ್ ಕೊಡುತ್ತಾರೆ. ಆಗ ಈ ವಿಷಯ [illegible] ಬಯಲಿಗೆ ಬಂತಲ್ಲ ಎಂದು ಹೆಡ್-ಆಫ್-ದಿ-ಡಿಪಾರ್ಟ್‌ಮೆಂಟ್ ಪ್ರೊಫೆಸರ್‌ರವರು ಕೋರ್ಟಿಗೆ ಹೋಗುತ್ತಾರೆ. ಅವರಿಗೆ ನೀವು ಏನು ಮಾತನಾಡಬಾರದು ಎಂದು ಕೋರ್ಟಿನಿಂದ ಇನ್‌ಜೆಂಕ್ಷನ್ ಆರ್ಡರ್ ತರುತ್ತಾರೆ. ಈ ಇನ್‌ಜೆಂಕ್ಷನ್ ಆರ್ಡರ್ ತಂದ ತಕ್ಷಣ ಈ ಸರ್ಕಾರ ಯೋಚಿಸಿರತಕ್ಕಂಥಾದ್ದು ಅವರು ವೈಯಕ್ತಿಕವಾಗಿ ಕೋರ್ಟಗೆ ಹೋಗಿದ್ದಾರೆ? ಅಥವಾ ವಿಶ್ವವಿದ್ಯಾನಿಲಯದ ಹೆಡ್-ಆಫ್-ದಿ-ಡಿಪಾರ್ಟ್‌ಮೆಂಟ್ ಆಗಿ ಕೋರ್ಟಿಗೆ ಹೋಗಿದ್ದಾರಾ? ಈ ರೀತಿ ಹೆಡ್-ಆಫ್-ದಿ-ಡಿಪಾರ್ಟ್‌ಮೆಂಟ್ ಹೋಗಬೇಕಾದರೆ ಇದಕ್ಕೆ ವಿಶ್ವವಿದ್ಯಾನಿಲಯದವರು ಪರ್ಮಿಷನ್ ಕೊಟ್ಟಿದ್ದಾರೆಯೇ? ಸರ್ಕಾರದವರು ಪರ್ಮಿಷನ್ ಕೊಟ್ಟಿದ್ದಾರೆಯೇ? ಇದರಬಗ್ಗೆ ತಾವು ಚೆಕ್ ಮಾಡಬೇಕು.

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೇ, ಒಂದು ನಿಮಿಷ. ಕರ್ನಾಟಕ ಧನ ವಿನಿಯೋಗ ವಿಧೇಯಕ-2000 ಅನ್ನು ಇಲ್ಲಿ ಮಂಡಿಸಿ, ಪಾಸ್ ಮಾಡಿ ಮೇಲ್ಮನೆಗೆ ಕಳುಹಿಸಬೇಕಾಗಿದೆ, ಆದ್ದರಿಂದ, ಇದನ್ನು ಮಂಡಿಸಿ ಪಾಸ್ ಮಾಡಿದ ನಂತರ ತಾವು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶಾಸನ ರಚನೆ

ಕರ್ನಾಟಕ ಧನ ವಿನಿಯೋಗ ವಿಧೇಯಕ, 2000

ಮಂಡಿಸಲು ಅನುಮತಿ ಕೋರಿಕೆ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಛೇರ್ಮನ್‌ರವರೆ, "2000ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಛೇರ್ಮನ್ : ಪ್ರಸ್ತಾವ ಏನೆಂದರೆ, 2000ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿ ನೀಡುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಛೇರ್ಮನ್‌ರವರೆ, 2000 ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್ : ಅನುಬಂಧ-V ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಛೇರ್ಮನ್‌ರವರೆ, ಪರ್ಯಾಲೋಚನೆಯ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪೂರಕ ಅಂದಾಜುಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಇಷ್ಟಕ್ಕಿಂತ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಉದಾಹರಣೆಯನ್ನು ನೀಡಿ, ನಾನು ಎಲ್ಲದಕ್ಕೂ ಮೌನವಾಗಿಯೇ ಇರುತ್ತೇನೆ, ನನ್ನ ಬೆನ್ನು ನಾನು ತಟ್ಟಿಕೊಳ್ಳುವುದಿಲ್ಲ, ನಾನು ಮಾಡುವುದೇ ಸರಿ ಎನ್ನತಕ್ಕಂಥ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಏಕೆಂದರೆ, ಆಡಳಿತದ ಪಕ್ಷದ ಸದಸ್ಯರ ಸಂಖ್ಯೆ 133 ಇದ್ದುದ್ದು ಈಗ 151ಕ್ಕೆ ಏರಿದೆ. ಇದರಲ್ಲಿ ಅವರ ಜೊತೆಯಲ್ಲಿ ಎಷ್ಟು ಸದಸ್ಯರು ಇದ್ದಾರೆ, ಎಷ್ಟು ಸದಸ್ಯರು ಇಲ್ಲವೋ ನನಗಂತೂ ಗೊತ್ತಿಲ್ಲ, ಈಗ ನಾನು ಆ ಬಗ್ಗೆ ಮಾತನಾಡುವುದಕ್ಕೆ ಇಚ್ಛಿಸಬುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಏನು ವಿಚಾರಗಳನ್ನು ಹೇಳಿದ್ದಾರೆ, ಅವರ ಆಚಾರಕ್ಕೂ ಅವರ ವಿಚಾರಗಳಿಗೂ ಸಂಬಂಧವಿಲ್ಲ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಒಂದೆರಡು ಉದಾಹರಣೆಗಳನ್ನು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ, ಪರವಾಗಿಲ್ಲ ಆದರೂ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ. ಮಾನ್ಯ ಸಂಸದೀಯ ಸಚಿವರಿಗೆ ನಮ್ಮ ಮೇಲೆ ಅನುಮಾನ ಬದು ಬಿಟ್ಟಿತ್ತು. ಏಕೆಂದರೆ ಇವರೇನು ಫೈನಾನ್ಷಿಯಲ್ ಬಿಲ್ ಪಾಸ್ ಮಾಡಿಕೊಡುತ್ತಾರೋ ಅಥವಾ ಇಲ್ಲವೋ ಎಂದು ಅವರಿಗೆ ಅನುಮಾನವಿತ್ತು. ನಾವು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ. ಇವರು ಏನು ಹೇಳಿದರು ಎಂದರೆ, ನಮ್ಮದು ಪಾರದರ್ಶಕವಾದ ಸರ್ಕಾರ, ಸರ್ಕಾರದ ಎಲ್ಲಾ ಫ್ಯಾಕ್ಟ್ ಅನ್ನು ಕರಗಿಸುತ್ತೇವೆ. ಭ್ರಷ್ಟಚಾರದ ವಿರುದ್ಧ ಧರ್ಮಯುದ್ಧವನ್ನೇ ಸಾರಿದ್ದೇವೆ, ಇದು ಅಧಿಕಾರಿಗಳಿಂದ ನಿಯಂತ್ರಿತವಾದ ಸರ್ಕಾರವಲ್ಲ, ನಮ್ಮ ಮಂತ್ರಿಗಳೆಲ್ಲರೂ ಎಲ್ಲಾ ತಾಲ್ಲೂಕು, ಜಿಲ್ಲೆಗಳಿಗೆ ಹೋಗಿ ಸಮೀಕ್ಷೆ ಮಾಡಿ ಸರ್ಕಾರಿ ಆಡಳಿತದ ಯಂತ್ರವನ್ನು ಸರಿಮಾಡಿದ್ದಾರೆಂದು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದ್ದರು. ಇದಕ್ಕೆ ನಾನು ಏನು ಹೇಳಿದೆ ಎಂದರೆ, ಸ್ವಾಮಿ ನಿಮ್ಮದು ಬಂಡವಾಳ ಇಲ್ಲದ ಬಡಾಯಿ, ಮುನ್ನೂರು ಕೋಟಿ ರೂಪಾಯಿಗಳನ್ನು ಖೋತಾ ತೋರಿಸಿದ್ದೀರಿ, ನಿಮ್ಮ ಸಂಪನ್ಮೂಲ ಕ್ರೋಢೀಕರಿಸತಕ್ಕಂಥಾದ್ದೇ ಮುನ್ನೂರು ನಲವತ್ತು ಕೋಟಿ ರೂಪಾಯಿಗಳು, ಎಂದು ಹೇಳಿದಿರಿ, ಅದರಲ್ಲಿ ಐವತ್ತು ಕೋಟಿ ರೂಪಾಯಿಗಳು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನಿಂದ ಬರುತ್ತದೆ ಎಂದು ಹೇಳಿದ್ದೀರಿ, ಇದು ಬರುವುದಿಲ್ಲ. ಏಕೆಂದರೆ, ನೀವು ಏನು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನ ಮೇಲೆ ಎಕ್ಸ್‌ಪೆಕ್ಟೇಷನ್ ಇಟ್ಟುಕೊಂಡಿದ್ದೀರಿ, ಅದು ಆಗುವುದಿಲ್ಲ, ರಿಜಸ್ಟ್ರೇಷನ್ ಆಗುವುದಿಲ್ಲ, ಇವರು ಜಾಸ್ತಿ ಮಾಡಿದಷ್ಟು ಹೊರಗಡೆ ಹೋಗುತ್ತಾರೆ. ಇದರಲ್ಲಿ ನೀವು ಏನು ಸಂಶಯ ಇಟ್ಟುಕೊಳ್ಳಬೇಡಿ ಏಕೆಂದರೆ ನಾವು ಎಲ್ಲಾ ಅನುಭವಿಸಿದ್ದೇವೆ. ಇವರು ಸುಮ್ಮನೆ ಹೇಳಿಕೊಂಡಿದ್ದಾರೆ. ಪ್ಲಾನಿಂಗ್ ಕಮೀಷನ್ ಮುಂದೆ ಹೋಗಿ ಇವರು ನಾನು ಈ ರಾಷ್ಟ್ರದ ಅತ್ಯಂತ ದಕ್ಷ ಮುಖ್ಯಮಂತ್ರಿ ಎಂದು ತೋರಿಸಿಕೊಳ್ಳುವುದಕ್ಕೆ